# ಕುಷ್ಠರೋಗದಿಂದ ನಿಮ್ಮನ್ನು ನೀವು ಕಾಪಾಡಿಕೊಳ್ಳುವುದು ಹೇಗೆ?

ಜೊಯೆಲ್ ಅಲ್ಮೇಡ ಪಿಎಚ್‌ಡಿ, ಎಮ್‌ಬಿಬಿಎಸ್

ಕುಷ್ಠರೋಗ ಒಂದು ವಾಸಿ ಮಾಡಬಹುದಾದ ರೋಗಾಣುವಿನಿಂದ ಬರುವ ಒಂದು ರೋಗ. ಭಾರತದ ಯಾವುದೇ ಒಂದು ಸಾಮಾಜಿಕ ಅಥವ ಆರ್ಥಿಕ ವರ್ಗಗಳೂ ಇದಕ್ಕೆ ಹೊರತಾಗಿಲ್ಲ. ಕುಷ್ಠರೋಗವನ್ನು ಅರ್ಥ ಮಾಡಿಕೊಳ್ಳುವುದೂ, ಮತ್ತು ಅದರಿಂದ ನಿಮ್ಮನ್ನು ರಕ್ಷಿಸಿಕೊಳ್ಳುವುದೂ ಬಹಳ ಮುಖ್ಯ.

ಪ್ರತಿ ಕೆಲವೇ ನಿಮಿಷಗಳ ಅಂತರದಲ್ಲಿ ಭಾರತದಲ್ಲಿ ಒಂದು ಹೊಸ ಕುಷ್ಠರೋಗಿಯನ್ನು ಮಕ್ಕಳಲ್ಲಾಗಲೀ ವಯಸ್ಕರಲ್ಲಾಗಲೀ ನಾವು ಕಾಣುತ್ತೇವೆ. ಇದು ಒಳ್ಳೆಯದು ಏಕೆಂದರೆ ಇದರಿಂದ ರೋಗಿಯು ಅಂಗವಿಕಲನಾಗುವ ಮೊದಲು ರೋಗಿಯ ಚಿಕಿತ್ಸೆಯನ್ನು ಪ್ರಾರಂಭಿಸಲು ಸಾಧ್ಯವಾಗುತ್ತದೆ. ಕುಷ್ಠರೋಗವನ್ನು ಭಾರತದಿಂದ ಪೂರ್ಣವಾಗಿ ಹೊರದೂಡಲಾಗಿದೆ ಎಂಬ ಹೇಳಿಕೆಯು ತಪ್ಪು ಹೇಳಿಕೆಯಾಗಿದೆ ಅಲ್ಲದೆ ಇಂಥಾ ಹೇಳಿಕೆಯು ನಿಮ್ಮ ಆರೋಗ್ಯದ ದೃಷ್ಟಿಯಿಂದ ಅಪಾಯಕಾರಿಯಾಗಿದೆ. ೨೦೧೩ ರ ತನ್ನ ವರದಿಯಲ್ಲಿ ಡಬಲ್ಯೂ.ಎಚ್.ಓ. ಅಂತಿಮ ಹಾಗೂ ನಿರ್ಣಾಯಕ ಹೇಳಿಕೆಯಲ್ಲಿ ಹೀಗೆಂದು ಸ್ಪಷ್ಟಪಡಿಸಿದೆ, " ರೋಗದ ನಿರ್ಮೂಲನ ಎಂದರೆ ಒಂದು ನಿರ್ದಿಷ್ಠ ಪ್ರದೇಶದಲ್ಲಿ ಒಂದೇ ಒಂದೂ ಹೊಸ ರೋಗದ ಪತ್ತೆಯಾಗದಿರುವುದು".

ಮುಂದಿನ ಹತ್ತು ವರ್ಷಗಳಲ್ಲಿ ಭಾರತದಲ್ಲಿ ಒಂದು ಮಿಲಿಯನ್ ಭಾರತೀಯರು ಈ ರೋಗದ ಚಿನ್ಹೆಗಳನ್ನು ತೋರ್ಪಡಿಸಲಿದ್ದಾರೆ. ನೀವು ಭಾರತದ ಒಂದು ನಗರದಲ್ಲಿ ವಾಸಿಸುತ್ತಿದ್ದರೆ ನಿಮ್ಮ ಸುತ್ತ ದೊಡ್ಡ ದೊಡ್ಡ ಕಟ್ಟಡಗಳಿದ್ದು ಅಲ್ಲಿ ೧೦೦೦ ಮಂದಿ ವಾಸಮಾಡುತ್ತಿರಬಹುದು. ಅವರಲ್ಲಿ ಮುಂದಿನ ಹತ್ತು ವರ್ಷಗಳಲ್ಲಿ ಒಬ್ಬ ಕುಷ್ಠರೋಗದ ಚಿನ್ಹೆಯುಳ್ಳ ವ್ಯಕ್ತಿಯು ಕಾಣಸಿಗುವ ಸಾಧ್ಯತೆಯಿದೆ. ಕುಷ್ಠ ರೋಗದ ಚಿನ್ಹೆಗಳನ್ನು ತೋರ್ಪಡಿಸುವ ವ್ಯಕ್ತಿಗಳು ಹಿಮಗಡ್ಡೆಯ ತುದಿ ಮಾತ್ರದಂತೆ. ಮುಂದಿನ ಹತ್ತು ವರ್ಷಗಳಲ್ಲಿ ೨೦ರಿಂದ ೧೦೦ ಕ್ಕಿಂತ ಹೆಚ್ಚು ಮಿಲ್ಲಿಯನ್ ವ್ಯಕ್ತಿಗಳು ಕುಷ್ಠ ರೋಗದ ಸೋಂಕನ್ನು ಹೊಂದುತ್ತಾರೆ ಆದರೆ ಅವರು ಯಾವುದೇ ರೋಗಚಿನ್ಹೆಗಳನ್ನು ತೋರ್ಪಡಿಸುವುದಿಲ್ಲ.

ಭಾರತದಲ್ಲಿ ನೆರಳಿನಲ್ಲಿ ಒಣಗುವ ಕುಷ್ಠರೋಗದ ಸೂಕ್ಷ್ಮಾಣುಗಳು ಐದು ತಿಂಗಳವರೆಗೆ ಬದುಕಿದ್ದು ಹೊಸ ಆತಿಥೇಯ ದೇಹದ ಒಳಹೊಕ್ಕ ಕೂಡಲೇ ಮತ್ತೆ ವೃದ್ಧಿಸತೊಡಗಬಲ್ಲವು. ಚೈನಾದ ಶಾನ್‌ಥಾಂಗ್ ಪ್ರಾಂತ್ಯದಲ್ಲಿ ಐವತ್ತು ವರ್ಷಗಳ ಹಿಂದೆ ಮತ್ತು ನಾರ್ವೇಯಲ್ಲಿ ಒಂದು ಶತಮಾನದ ಹಿಂದೆ ಕುಷ್ಠ ರೋಗದ ಹೊಸ ಸಂದರ್ಭಗಳ ೧೦ % ರಷ್ಟು ತ್ವರಿತ ಕಡಿತ ಕಂಡುಬಂದಿತ್ತು. ಅದಕ್ಕೆ ಕಾರಣ ಅತ್ಯಂತ ಹೀನ ದರ್ಜೆಯ ಬಡತನವು ಕಡಿಮೆಯಾಗಿದ್ದುದು. ಆದ್ರೆ ಭಾರತದ ಸ್ಥಿತಿಯೇ ಬೇರೆ. ೨೦೦೮-೨೦೦೯ ಮತ್ತು ೨೦೧೨ -೨೦೧೩ ರಲ್ಲಿ ರೋಗ ಪತ್ತೆ ಮಾಡುವ ಸಂದರ್ಭದಲ್ಲಿ ಕಣ್ಣಿಗೆ ಗೋಚರವಾಗುವ ಅಂಗವಿಕಲತೆಯುಳ್ಳ ರೋಗಿಗಳ ಸಂಖ್ಯೆ ಹೆಚ್ಚಾಯಿತು. ನೀವು ಶ್ರೀಮಂತರೇ ಆಗಿದ್ದರೂ ನಗರದ ಕೊಳಚೆ ಪ್ರದೇಶಗಳಲ್ಲಿ ಮತ್ತು ಹಳ್ಳಿಗಳಲ್ಲಿ ಅತ್ಯಂತ ಹೀನ ಸ್ಥಿತಿಯ ಬಡತನವನ್ನು ಕಡಿಮೆ ಮಾಡುವುದು ನಿಮಗೆ ಲಾಭದಾಯಕವೇ ಆಗಿದೆ.

ಚಿಕಿತ್ಸೆಗೆ ಒಳಪಡದ ಕುಷ್ಠರೋಗವು ನರಗಳನ್ನು ನಾಶಪಡಿಸಿ ನೋವಿನ ಅನುಭವವು ಆಗದಂತೆ ಮಾಡುತ್ತದೆ. ಮತ್ತೆ ಮತ್ತೆ ಆಗುವ ಗಾಯಗಳಿಂದ ನಿಮ್ಮ ಕೈಕಾಲಿನ ಬೆರಳುಗಳು, ಕಣ್ಣುಗಳು ಮತ್ತು ಕಾಲುಗಳು ಸವೆದು ಹೋಗಿ ತೋರ್ಪಡುವ ಅಂಗವಿಕಲತೆಯುಂಟಾಗುತ್ತದೆ. ನರಗಳ ನಾಶದಿಂದ ಕೈಕಾಲುಗಳ ಮುಖದ ಮಾಂಸಖಂಡಗಳು ಪಾರ್ಶ್ವವಾಯುವಿಗೆ ತುತ್ತಾಗುತ್ತವೆ. ಇದರಿಂದಾಗಿ ನಿಮಗೆ ಕೈ ಬೆರಳುಗಳನ್ನು ಚಾಚಲು, ಕಾಲ್ಬೆರಳುಗಳನ್ನು ನಡೆಯುವಾಗ ಎತ್ತಿಹಿಡಿಯಲು ಅಥವಾ ಕಣ್ಣುರೆಪ್ಪೆಗಳನ್ನು ಮುಚ್ಚಲು ಸಾಧ್ಯವಾಗುವುದಿಲ್ಲ. ನರಗಳಿಗೆ ಹಾನಿಯಾಗುವ ಮೊದಲು ರೋಗವನ್ನು ಕಂಡುಹಿಡಿದು ಚಿಕಿತ್ಸೆಗೆ ಒಳಪಡುವುದು ಒಳ್ಳೆಯದು.

ನಿಮಗೆ ಒಂದು ಬಾಲ್ ಪೆನ್ನಿನ ತುದಿಯ ಸ್ಪರ್ಶವನ್ನು ತಿಳಿಯಲಾಗದ ಬಿಳಿಯ ಮಚ್ಚೆಗಳಿದ್ದರೆ, ಅಥವಾ ಕೈಕಾಲುಗಳಿಗೆ ನೋವಾಗದ ಗಾಯಗಳಾಗುತ್ತಿದ್ದಲ್ಲಿ, ನಿಮ್ಮ ಹೊರಕಿವಿಯು ಊದಿಕೊಂಡಿದ್ದಲ್ಲಿ, ಅಥವಾ ನಿಮ್ಮ ಕೈ ಬೆರಳುಗಳನ್ನು ನೇರಪಡಿಸಲಾಗದಿದ್ದಲ್ಲಿ ನೀವು ನಿಮ್ಮ ಹತ್ತಿರದ ಸರ್ಕಾರೀ ಆಸ್ಪತ್ರೆಯ ಚಿಕಿತ್ಸಾ ಕೇಂದ್ರಕ್ಕೆ ಭೇಟಿಕೊಡಲೇ ಬೇಕು. ಅವರು ಪುಕ್ಕಟೆಯಾಗಿ ನಿಮ್ಮ ರೋಗಪತ್ತೆಯನ್ನು ಮತ್ತು ಅಗತ್ಯವಿದ್ದಲ್ಲಿ ಎಮ್.ಡಿ.ಟಿ. ಚಿಕಿತ್ಸೆಯನ್ನೂ [ ಅನೇಕ ಔಷಧಿಗಳ ಚಿಕಿತ್ಸಾ ಕ್ರಮ] ಕ್ರಮಗೊಳಿಸುತ್ತಾರೆ. ನಿಮಗೇನಾದರೂ ಕುಷ್ಠರೋಗಪತ್ತೆಯಾದಲ್ಲಿ ನಿಮ್ಮ ಮನೆಯವರೆಲ್ಲರಿಗೂ ರೋಗಪತ್ತೆಯನ್ನು ಮಾಡಿಸಬೇಕು. ಅವರೂ ಸಹ ರೋಗಕ್ಕೆ ಒಳಗಾಗಿರುವ ಸಾಧ್ಯತೆಯಿರುತ್ತದೆ.

ಎಮ್.ಡಿ.ಟಿ. ಕುಷ್ಠರೋಗದ ರೋಗಾಣುಗಳನ್ನು ತ್ವರಿತವಾಗಿ ಸಾಯಿಸುತ್ತದೆ. ಎಮ್.ಡಿ.ಟಿ. ಆರಂಭಿಸಿದ ಕೆಲವೇ ಕೆಲವು ದಿನಗಳಲ್ಲಿ ಅತ್ಯಂತ ಸಾಂಕ್ರಾಮಿಕವಾಗಿರುವ ರೋಗಾಣುಗಳನ್ನು ಒಳಗೊಂಡಿರುವ ಕುಷ್ಠರೋಗವನ್ನೂ ಸಹ ಸಾಂಕ್ರಾಮಿಕವಲ್ಲದಂತೆ ಮಾಡುತ್ತದೆ. ಆದಾಗ್ಯೂ ಎಮ್.ಡಿ.ಟಿ ನರಗಳ ಹಾನಿಯನ್ನು ತಡೆಯಲು ಸಾಕಾಗುವುದಿಲ್ಲ.
ಎಮ್.ಡಿ.ಟಿ. ಪ್ರಾರಂಭಿಸಿದ ಎರಡು ವರ್ಷಗಳಲ್ಲಿ ಅತ್ಯಂತ ಗಂಭೀರ ರೀತಿಯ ನರಹಾನಿಯಾಗುವ ಸಂಭವವಿದೆ. ಏಕೆಂದರೆ ಸಾಯಿಸಲ್ಪಟ್ಟ ರೋಗಾಣುಗಳ ಮೇಲೆ ನಿಮ್ಮ ದೇಹ ಯುದ್ಧ ಹೂಡುತ್ತದೆ. ಇದನ್ನು ವ್ರಣವಾಗುವಿಕೆ ಎನ್ನುತ್ತೇವೆ. ನಿಮ್ಮ ನರಗಳು ಯುದ್ಧಭೂಮಿಯಾಗುತ್ತವೆ. ನರಗಳಲ್ಲಿ ವ್ರಣವಾಗುವುದನ್ನು ನ್ಯೂರೈಟಿಸ್ ಎನ್ನುತ್ತೇವೆ. ಇದು ನರಗನ್ನು ಶಾಶ್ವತವಾಗಿ ಹಾನಿ ಪಡಿಸಿ ತೋರ್ಪಡುವ ಅಂಗವಿಕಾರವನ್ನು ಉಂಟುಮಾಡುತ್ತದೆ. ಆದ್ರೆ ನ್ಯೂರೈಟಿಸ್ ದುರದೃಷ್ಟವಶಾತ್ ಅದಗಿರುತ್ತದೆ.[ಮೂಕವಾಗಿರುತ್ತದೆ] ಅಂಗವಿಕಾರಗಳು ಆಗುವವರೆಗೂ ನಿಮಗೆ ಗೊತ್ತಾಗದೇ ಹೋಗುಬಹುದು.

ಎಮ್.ಡಿ.ಟಿ. ಆರಂಭಿಸಿದ ಮೊದಲ ಎರಡು ವರ್ಷಗಳು ಪ್ರತಿ ತಿಂಗಳೂ ನರಹಾನಿಯನ್ನು ಪರೀಕ್ಷಿಸಲು ಕುಶಲ ಮತ್ತು ಅನುಭವವುಳ್ಳ ಕುಷ್ಠರೋಗ ಕಾರ್ಯಕರ್ತರ ಅವಶ್ಯಕತೆಯಿರುತ್ತದೆ. ಈ ಹಿಂದೆ ಅಂಥಹ ಕಾರ್ಯಕರ್ತರುಗಳು ಲಭ್ಯವಿದ್ದರು. ಆದರೆ ಸಮಯಕ್ಕೆ ಮುಂಚೆಯೇ ತಪ್ಪಾಗಿ ಕುಷ್ಠ ರೋಗವು ನಿರ್ಮೂಲನಗೊಂಡಿದೆ ಎಂದು ಕೊಟ್ಟ ಹೇಳಿಕೆಗಳಿಂದಾಗಿ ಈಗ ಅಂಥಹ ಕಾರ್ಯಕರ್ತರುಗಳ ನಿರ್ಮೂಲನವಾಗಿದೆ. ಕುಶಲ ಕಾರ್ಯಕರ್ತರುಗಳು "ಮೂಕ" ಹುದುಗಿರುವ ನ್ಯೂರೈಟಿಸ್‌ಗಳನ್ನೂ ಪತ್ತೆ ಹಚ್ಚಲು ಸಾಧ್ಯವಿರುವವರು. ಹಾಗಾಗಿ ಸಕಾಲಕ್ಕೆ ನರಗಳ ವ್ರಣವಾಗುವಿಕೆಯ ವಿರುದ್ಧ ಚಿಕಿತ್ಸೆ ದೊರಕಿಸಿಕೊಳ್ಳಲು ಸಾಧ್ಯವಾಗುತ್ತದೆ. ಇದರಿಂದ ನಿಮ್ಮ ನರಗಳನ್ನು ಕಾಪಾಡಿಕೊಂಡು ಮುಂದಿನ ಆಜೀವಪರ್ಯಂತದ ಅಂಗವಿಕಾರತೆಯನ್ನು ತಡೆಗಟ್ಟಬಹುದು. ಇದು ಅಂದರೆ ನರಗಳ ಹಾನಿಯನ್ನು ಕಣ್ಣಿಟ್ಟು ಗಮನಿಸಿ ಚಿಕಿತ್ಸೆ ನೀಡುವುದು ಮುಂದೆ ಶಾಶ್ವತ ಅಂಗವಿಕಾರವನ್ನು ನೋಡಿಕೊಳ್ಳುವುದಕ್ಕಿಂತ ಹೆಚ್ಚಾಗಿ ಭಾರತೀಯ ಕುಷ್ಠರೋಗ ಕಾರ್ಯಕ್ರಮಕ್ಕೆ ಒಳ್ಳೆಯದು ಮತ್ತು ದುಬಾರಿಯಲ್ಲದ್ದು.

ಚಿಕಿತ್ಸೆಗೆ ಒಳಪಟ್ಟ ತೋರ್ಪಡಿಸಿಕೊಳ್ಳುವ ಅಂಗವಿಕಾರವಿರುವ ರೋಗಿಗಳ ರೋಗವೂ ಸಹ ಸಾಧಾರಣವಾಗಿ ಸಾಂಕ್ರಾಮಿಕವಲ್ಲ. ಅವರೂ ನಿಮ್ಮಂತೆಯೇ, ಆದರೆ ಅವರ ನರಗಳನ್ನು ಹಿಂದೊಮ್ಮೆ ಕುಷ್ಠರೋಗದ ರೋಗಾಣುಗಳು ಆಕ್ರಮಿಸಿದ್ದವು. ಈಗ ಅವರ ದೇಹದಲ್ಲಿ ರೋಗಾಣುಗಳಿಲ್ಲ. ಅವುಗಳು

ಎಂದೋ ಸತ್ತುಹೋಗಿವೆ. ಅವರನ್ನು ಎಲ್ಲರಂತೆಯೇ ಪ್ರೀತಿ ಮತ್ತು ಗೌರವದಿಂದ ಕಾಣಬಹುದು. ಅವರು ನೀವೂ ಆಗಬಹುದಿತ್ತು. ನಿಮಗೆ ತೋರ್ಪಡುವ ಅಂಗವಿಕಾರ ಕಾಣಿಸಿಕೊಂಡಲ್ಲಿ ಭಾರತೀಯ ಕುಷ್ಠರೋಗ ಕಾರ್ಯಕ್ರಮ ಮತ್ತು ಅವರ ಸಹಭಾಗಿಗಳಿಂದ ನಿಮಗೆ  ಪುನಃರಚಿಸುವ ಶಸ್ತ್ರಚಿಕಿತ್ಸೆ, ಪುನರ್ವಸತಿ ಮತ್ತು ಬೆಂಬಲಗಳು ಲಭ್ಯವಿದೆ. ನೀವು ಅವುಗಳನ್ನು ಕೇಳಿ ಪಡೆಯಬಹುದು.

ನೀವು ಹೇಗೆ ಬದಲಾವಣೆ ತರಬಲ್ಲಿರಿ :

ನೀವು ನಿಮ್ಮನ್ನೂ ನಿಮ್ಮ ಪ್ರೀತಿಪಾತ್ರರನ್ನೂ ಕುಷ್ಠರೋಗದಿಂದ ರಕ್ಷಿಸಿಕೊಳ್ಳಲು ಕಾರ್ಯ ಕೈಗೊಳ್ಳಬಹುದು. ನೀವು ನಿಮ್ಮ ಎಮ್.ಎಲ್.ಎ., ಎಮ್.ಪಿ, ಪಂಚಾಯತ್ ಸದಸ್ಯರು ಹಾಗೂ ನಗರಸೇವಕರಿಗೆ ಭಾರತೀಯ ಕುಷ್ಠರೋಗ ಕಾರ್ಯಕ್ರಮಕ್ಕೆ ಬೆಂಬಲ ಸೂಚಿಸಿ ಪತ್ರ ಬರೆಯಬಹುದು. ಹಾಗೂ ಅದರ ಜೊತೆ ಕುಷ್ಠ ರೋಗದಿಂದುಂಟಾಗುವ ಗಂಭೀರ ನರಹಾನಿಯ ಇನ್ನೂ ಉತ್ತಮ ವ್ರಣವಿರುದ್ಧದ ಚಿಕಿತ್ಸೆಯ ಬಗ್ಗೆ ಪತ್ರದಲ್ಲಿ ಒತ್ತಾಯ ನೀಡಬಹುದು.

ಅವರಿಗೆ ನೀವು ಹೀಗೆ ಮಾಹಿತಿ ನೀಡಬಹುದು.:

೧. ಡಬಲ್ಯೂ.ಎಚ್.ಓ. ದ ೨೦೧೩ರರ ಹೇಳಿಕೆಯಂತೆ ಕುಷ್ಠರೋಗದ ನಿರ್ಮೂಲನವಾಗಿಲ್ಲ. ಮುಂದಿನ ಹತ್ತು ವರ್ಷಗಳಲ್ಲಿ ಒಂದು ಮಿಲಿಯನ್ ಭಾರತೀಯರು  ಹೊಸದಾಗಿ ಈ ರೋಗಕ್ಕೆ ತುತ್ತಾಗಲಿದ್ದಾರೆ. ರಾಜಕೀಯ ವ್ಯಕ್ತಿಗಳ ಮನೆಯವರಿಗೂ ಮತ್ತು ಗೆಳೆಯರಿಗೂ ಇದು ಸೋಂಕಬಹುದು. ಆದ್ದರಿಂದ ಭಾರತದಲ್ಲಿ ಒಂದು ಬಲವಾದ ಕುಷ್ಠರೋಗ ಕಾರ್ಯಕ್ರಮದಿಂದ ಎಲ್ಲರಿಗೂ ಲಾಭವಾಗುತ್ತದೆ.

೨. ಭಾರತೀಯ ಕುಷ್ಠರೋಗ ಕಾರ್ಯಕ್ರಮವು ಎಮ್.ಡಿ.ಟಿ. ಚಿಕಿತ್ಸೆ ಆರಂಭಿಸಿದ ಎರಡು ವರ್ಷಗಳಲ್ಲಿ ತಿಂಗಳಿಗೊಮ್ಮೆ ನರಹಾನಿಯನ್ನು ಪರೀಕ್ಷಿಸಲು ತರಬೇತಿ ಪಡೆದ ಕುಷ್ಠರೋಗ ಕಾರ್ಯಕರ್ತರನ್ನು ನೇಮಿಸಬೇಕು. ಇಲ್ಲದಿದ್ದರೆ ಪ್ರತಿ ವರ್ಷ ಬಹುತೇಕ ಸಾವಿರಾರು ಭಾರತೀಯರು ತೋರ್ಪಡುವ ಅಂಗವಿಕಾರಕ್ಕೆ ಎಮ್.ಡಿ.ಟಿ ಇದ್ದಾಗ್ಯೂ ಸಹ ತುತ್ತಾಗುತ್ತಾರೆ. ಯಾಕಂದರೆ ವ್ರಣ ವಿರುದ್ಧದ ಚಿಕಿತ್ಸೆಯು ವಿಳಂಬಿತವಾಗುವುದರಿಂದ.

ನೀವು ಪತ್ರ ಬರೆಯುವುದರಿಂದ ನೀವೂ, ನಿಮ್ಮ ಕುಟುಂಬದವರೂ ಹಾಗೂ ನಿಮ್ಮ ಸ್ನೇಹಿತರೂ ಇದರಿಂದ ಸುರಕ್ಷಿತವಾಗಿರಬಹುದು.

---------------------------------------

ಈ ಬರಹವನ್ನು ಭಾರತೀಯ ವೈದ್ಯಕೀಯ ಕಾಲೇಜುಗಳ ಹಳೆಯ ವಿದ್ಯಾರ್ಥಿಗಳ ಆನ್‌ಲೈನ್ ಚರ್ಚೆಯಿಂದ ಶುರುಮಾಡಲಾಗಿದೆ. ಬರಹದ ಕರಡು ಪ್ರತಿಯನ್ನು ಡಬಲ್ಯೂ ಎಚ್ ಒ , [ಐ.ಎಲ್.ಇ.ಪಿ] ಅಂತರ ರಾಷ್ಟ್ರೀಯ ಕುಷ್ಠರೋಗ ವಿರುದ್ಧ ಹೋರಾಡುವ ಸಂಘಗಳ ಒಕ್ಕೂಟ, ಸಹಾನುಭೂತಿಯುಳ್ಳ ದೇಶದಲ್ಲಿ ಅಲ್ಲಲ್ಲಿ ಕೆಲಸ ಮಾಡುತ್ತಿರುವ ಭಾರತೀಯ ವೈದ್ಯರುಗಳು, ನಿಪ್ಪಾನ್ ಫೌಂಡೆಶನ್, ಪ್ರಪಂಚದ ಕುಷ್ಠ ರೋಗ ನಿಪುಣರುಗಳು ಮತ್ತು ನೊವಾರ್ಟಿಸ್ ಫೌಂಡೇಶನ್ ಫಾರ್ ಸಸ್ಟೈನಬಲ್ ಡೆವೆಲಪ್‌ಮೆಂಟ್ ಇವರುಗಳೊಂದಿಗೆ ಹಂಚಿಕೊಳ್ಳಲಾಯಿತು.

ಇಲ್ಲಿ ವ್ಯಕ್ತ ಪಡಿಸಿರುವ ಅಭಿಪ್ರಾಯಗಳಿಗೆ ಹೆಸರಿಸಿರುವ ಲೇಖಕರೇ ಜವಾಬುದಾರರು.